## ಕಥೆ

ಪುಣೆ – ಈ ಹೆಸರು ಉಂಟು ಮಾಡಿದ್ದ ಪುಳಕ ಅಷ್ಟಿಷ್ಟಲ್ಲ. ಬದುಕಿನಲ್ಲಿ ಒಮ್ಮೆಯಾದರೂ ಕಾಬಾಕ್ಕೆ ಹೋಗಿ ಅಲ್ಲಾಹುವಿನ ಕೃಪೆಗೊಳಗಾಗುವ ಇಚ್ಛೆಯ ಹಾಗೆ ಒಮ್ಮೆಯಾದರೂ ಪುಣೆಗೆ ಹೋಗಿ ಪುನೀತರಾಗಬೇಕೆಂದು ಸುತ್ತಲು ಊರಲ್ಲಿ ಅದೆಷ್ಟೋ ಜನರು ಹಪಹಪಿಸುತ್ತಿದ್ದರು.

ಬಕನಿಂಗನೂ ಪಾಮರನೇ. ಅವನು ಹೇಗೆ ಇತರರಿಂದ ಹೊರತಾದಾನು? ಅವನಿಗೆ ತುಸು ಹೆಚ್ಚೇ ಎನಿಸುವಷ್ಟು ತೆವಲು. ಧಾರ್ಷ್ಟ್ಯ ಕಡಿಮೆಯಿದ್ದರೂ ತೆವಲು ತೊಡೆ ಕೆರೆದುಕೊಳ್ಳುತ್ತಿತ್ತು. ಹೊಲ–ಮನೆ ಅನ್ನದೇ ತಿರುಗಾಡುತ್ತಿದ್ದ ರಿಕಾಮಿ ಮನುಷ್ಯ. ಮನೆಯವರಾದರೂ ಅವನನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಓಸಿ, ಮಟ್ಕಾ, ಹೊಡಬಿಲ್ಲಿ, ಅಂದರ್–ಬಾಹರ್ ಹೀಗೆ ಅವನ ತೆವಲುಗಳು ಅನೇಕ. ಅವನೊಮ್ಮೆ ಪುಣೆಗೆ ಹೋಗಿ ಬಂದಿದ್ದ. ಅಲ್ಲಿನ ರಂಗಿನ ಸುದ್ದಿಗಳನ್ನು ಕಕ್ಕಿಕೊಂಡು ಮೆಲ್ಲುತ್ತಿದ್ದ. ಹೀಗೆ ಕರ್ಜಗಿ, ಕೋಣನತಂಬಿಗಿ, ಮತ್ತೂರು, ಮಂಟಗಣಿ ಮಂದಿ ಪುಣೆದ ಪುಣ್ಯವನ್ನು ಮೆಲಕು ಹಾಕುತ್ತಿದ್ದರು.

ತಾರಾಳ ಮೈಬಣ್ಣ, ಮಾಟ, ಧಿಕಾವು, ಅವಳ ಝುಲಕ್, ತೊಂಡೆ ತುಟಿಗಳು, ಎದೆಯ ಫಲಕು, ಜರತಾರಿಯ ನೀರಿಗೆಗಳು, ಅವಳ ಒಂದು ಬಳುಕಿಗೆ ಸೋತು ಮಲಗುತ್ತಿದ್ದ ಅಬ್ಬೆಪಾರಿ ನಿದ್ದೆಗಳು, ಅವಳ ಪುಗ್ಗಾ ಜಂಪರ್ರು, ಹೊಕ್ಕಳು ಅಪ್ಪಿದ ಬಣ್ಣದ ಪಾತರಗಿತ್ತಿ ಈಗಲೂ ಕಪ್ಪಾಗಿರುವ ಕೇದಿಗೆ ಕುಲದ ಸೊಂಪು ಕೇಶರಾಶಿ, ಎಲ್ಲಕ್ಕಿಂತ ಹೆಚ್ಚಾಗಿ ಹೀಗೆಯೇ ಎಂಬಂತೆ ಕೆತ್ತಿಟ್ಟಂತಹ ತುಸು ಬೀಸಿಗೂ ಉಳುಕುವಂತಹ ಮೂಗು. ಈ ಎಲ್ಲವನ್ನು ಹಸಿದ ನಾಯಿ ಹಳಸನ್ನು ಲೊಚ ಲೊಚ ನೆಕ್ಕುವಂತೆ ಮದ್ಯೆ ಹಾಕಿಕೊಂಡು ಹಾಟುಗಳ್ಳರು ಬಾಡಿಸಿಕೊಳ್ಳುತ್ತಿದ್ದರು.

ಕಣ್ಣು, ಕಿವಿ ಹೋಗಿದ್ದ ಮುದಿಗಳ್ಳರೂ ಬೇರು ಚಿಗಿಸಿಕೊಳ್ಳುವಂತೆ ಸುದ್ದಿಗೆ ಕಿವಿಗೊಟ್ಟಿದ್ದರು. ಪುಟ್ಟವ್ವ ಈ ಹಿಂದೆ ಅಗಡಿಯಲ್ಲಿದ್ದಾಗ ಹೇಗಿದ್ದಳೋ ಈಗಲೂ ಹಾಗೆಯೇ ಇದ್ದಾಳೆಂದು.

ಹತ್ತು ವರ್ಷದ ಹಿಂದೆ ಮೆಣಸಿನಕಾಯಿ ಮಾರಲು ಪುಣೆಗೆ ಹೋಗಿದ್ದ ಯಳಂದರಾಯರು, 'ಅವಳು ದೇವಕನ್ನಿಕೆ ಕಣ್ರಲೇ... ಅವಳಿಗೆ ಮುಪ್ಪು ಅನ್ನೋದೇ ಇಲ್ಲಾ...' ಎಂದು ಬಣ್ಣಿಸಿದರು. 'ಅಕೀ ಜನ್ನತ್ ಕೀ ಪರಿ ಅದಾಳು...' ಪಕ್ಕದಲ್ಲೇ ಕೂತಿದ್ದ ಸುಬಾನಿ ತನ್ನದು ತುಸು ಇರಲಿ ಎಂದು ಸೇರಿಸಿದ.

ಸುತ್ತಲಿನ ಊರುಗಳಲ್ಲಿ ಪುಟ್ಟವ್ವನ ಹಜಾರದಲ್ಲಿ ಉಂಡು ಕೈತೊಳೆದವರು ಕೆಲವೇ ಕೆಲವರಲ್ಲಿ ಯಳಂದರಾಯರು ಒಬ್ಬರು. ಅವರು ಆ ಲೆವೆಲ್ಲಿನ ಮನುಷ್ಯ. ಈ ಕಾರಣಕ್ಕಾಗಿಯೇ ಅವರಿಗೊಂದು ಹೆಮ್ಮತ್ತು ಉಂಟಾಗಿತ್ತು. ಅವರ ಜೊತೆಗೆ ಥೈಲೀ ಹಿಡಿಯಲು ಹೋಗುತ್ತಿದ್ದ ಸುಬಾನಿ 'ಅಲ್ಲಾಹ ಮಾಫ್ ರೇ...' ಎಂದು ಹೊರ ಹಜಾರದಲ್ಲಿಯೆ ಪಿಜಾಮದ ಕಸಿ ಸಡಿಲಿಸಿಕೊಂಡು ಬಂದಿದ್ದ.

ಗೋಲಿಯಾಡುತ್ತಿದ್ದ ಪುಂಡ ಹುಡುಗರು ಇಂತಹ ಚರ್ಚೆಗಳನ್ನು ಕೇಳುತ್ತಾ ಏನೋ ಅನಿಸುವ, ಏನೂ ಅನಿಸದಿರುವ ಒಂದು ಅಭಾಸ ಅನುಭವಕ್ಕೆ ಈಡಾಗಿ ಮುಸಿಮುಸಿ ನಕ್ಕು ಬೈಯಿಸಿಕೊಳ್ಳುತ್ತಿದ್ದರು. ಅಂತಹವರಲ್ಲಿ ದುಬ್ಬೀರನೂ ಒಬ್ಬ. ಅವನಿಗೆ ಚಿಕ್ಕಂದಿನಿಂದಲೇ ಈ ರಸಪ್ರಸಂಗಗಳ ಕುರಿತು ಏನೋ ಮೋಹ. ಪುಟ್ಟವ್ವಳ ಚಹರೆಪಟ್ಟಿಯಲ್ಲಿ ಲೋಕದ ಸುಂದರಿಯರನ್ನೆಲ್ಲಾ ದುಬ್ಬೀರ ಕಲ್ಪಿಸಿಕೊಳ್ಳುತ್ತಿದ್ದ. ಮುಂದೊಮ್ಮೆ ತಾನೂ ಮೆಣಸಿನಕಾಯಿ ಬೆಳೆದು ಪುಣೆಯ ಲಾರೀ ಹತ್ತಬೇಕೆಂಬ ಕನಸು ಕಾಣತೊಡಗಿದ.

***

ಮೆಣಸಿನಕಾಯಿ ವ್ಯಾಪಾರಕ್ಕೆ ಬ್ಯಾಡಗಿ ಹೆಸರುವಾಸಿ. ಬ್ಯಾಡಗಿಯನ್ನು ಕಾಣದ ರೈತರು ಈ ಭಾಗದಲ್ಲಿ ಸಿಗುವುದು ಅಪರೂಪ. ಅರ್ಧ ಎಕರೆ ಹೊಲದ ರೈತ, ನೂರಾರು ಎಕರೆಯ ಜಮೀನ್ದಾರ – ಈ ಇಬ್ಬರನ್ನೂ ಮೆಣಸಿನಕಾಯಿ ವಖಾರ ಕಂಡಿದೆ. ಸಂಜೆ ರೇಡಿಯೋದಲ್ಲಿ ಮೆಣಸಿನಕಾಯಿ ಧಾರಣೆ ಕೇಳಿಕೊಂಡು ಚೀಲ, ಬೋದು, ಅಂಡಗಿ ತುಂಬಲು ರೈತರು ಶುರು ಮಾಡುತ್ತಿದ್ದರು. ಚೀಲ ತುಂಬಲು ಶುರುಮಾಡಿದರೆಂದರೆ ಮಕ್ಕಳ ಕಣ್ಣಿಗೆ ನಿದ್ದೆಯೇ ಇಲ್ಲ. ತಾವೂ ನಾಳೆ ಚಕ್ಕಡಿ, ಟ್ರ್ಯಾಕ್ಟರ್ ಏರಿ ಬ್ಯಾಡಗಿಯ ವಖಾರ ನೋಡಬೇಕೆನ್ನುವ ಕನಸು. ವಖಾರ ಎಂಬುದು ಅವರ ಪಾಲಿಗೆ ನೆಲದ ಮೇಲಿನ ಸ್ವರ್ಗವಾಗಿತ್ತು. ಯಾಕೆಂದರೆ ಅಲ್ಲಿಗೆ ಹೋದರೆ ಮಿರ್ಚಿ, ಜಿಲೇಬಿ, ಕೊಬ್ಬರಿಚಿನ್ನಿ, ಮೈಸೂರ ಪಾಕು ತಿನ್ನಬಹುದಿತ್ತು. ಅದಕ್ಕಾಗಿಯೇ ಚೀಲ ಒಂದಿರಲಿ,